

بسم الله الرّحمٰن الرّحيم

# ಪ್ರವಾದಿ ಚರಿತ್ರೆ – ಬದ್ರ್ ಯುದ್ಧ – ಯುದ್ಧಾನಂತರ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-09-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬದ್ರ್ ಯುದ್ಧದ ನಂತರದ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಿದ್ದೆ. ಈ ಘಟನೆಗಳಿಂದ ನಮಗೆ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಘಟನೆಗಳ ಬಗ್ಗೆ ಗೊತ್ತಾಗುತ್ತದೆ. ಅದರೊಂದಿಗೆ ಇತಿಹಾಸದ ಅಧ್ಯಯನ ಮಾಡುವಾಗ ಕೆಲವು ಚಾರಿತ್ರಿಕ ಸಂಗತಿಗಳ ಬಗ್ಗೆಯೂ ತಿಳಿದುಬರುತ್ತದೆ. ಅದೇ ರೀತಿ ಕೆಲವು ತಪ್ಪಾದ ವರದಿಗಳ ಬಗ್ಗೆಯೂ ಗೊತ್ತಾಗುತ್ತದೆ. ಅಂತಹ ವರದಿಗಳು ಇಸ್ಲಾಮಿನ ಬಗ್ಗೆ ತಪ್ಪಾದ ಚಿತ್ರವನ್ನು ಅನ್ಯರ ಮುಂದೆ ಪ್ರಸ್ತುತಪಡಿಸಿವೆ. ಇಸ್ಲಾಮಿಗೆ ಕೆಟ್ಟ ಹೆಸರು ತರಲು ಇಸ್ಲಾಮಿನ ವಿರೋಧಿಗಳು ಅವುಗಳನ್ನು ದುರುಪಯೋಗಿಸುತ್ತಾರೆ ಹಾಗೂ ತೀವ್ರತೆಯನ್ನು ಇಷ್ಟಪಡುವ ಮುಸ್ಲಿಮರು ತಮ್ಮ ಉದ್ದೇಶಗಳನ್ನು ಸಾಧಿಸುವ ಗುರಿಯನ್ನು ಗಳಿಸುತ್ತಾರೆ.

ಇಂದು ನಾನು ವಿವರಿಸಲು ಬಯಸುವ ಮೊದಲ ಘಟನೆ ಉಮ್ಮೈರ್ ಬಿನ್ ವಹಬ್‌ರದ್ದಾಗಿದೆ. ಅವರು ಯುದ್ಧದ ನಂತರ ತನ್ನ ಮತ್ತು ಮುಶ್ರಿಕರ ಸೋಲಿನ ಸೇಡನ್ನು ತೀರಿಸಲು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಮಕ್ಕದಿಂದ ಮದೀನಕ್ಕೆ ಬಂದಿದ್ದರು. ಆದರೆ ಅಲ್ಲಿ ಅಲ್ಲಾಹನ ವಿಧಿಯು ಬೇರೆಯೇ ಕೆಲಸವನ್ನು ಮಾಡಿತು ಮತ್ತು ಅವರಿಗೆ ಇಸ್ಲಾಂ ಸ್ವೀಕಾರ ಮಾಡುವ ಸೌಭಾಗ್ಯ ಲಭಿಸಿತು.

ಇದರ ವಿಶದ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಬದ್ರಿನ ಕೈದಿಗಳಲ್ಲಿ ವಹಬ್ ಬಿನ್ ಉಮ್ಮೈರ್ ಕೂಡ ಇದ್ದನು. ಆತನ ತಂದೆಯಾದ ಉಮ್ಮೈರ್ ಬಿನ್ ವಹಬ್ ಖುರೈಶಿಗಳ ಮುಖಂಡರಲ್ಲಿ ಒಬ್ಬರಾಗಿದ್ದರು. ಒಂದು ದಿನ ಕಅ್‌ಬದ ಸಮೀಪದ ದಿಣ್ಣೆಯ ಬಳಿ ಕುಳಿತುಕೊಂಡು ಉಮ್ಮೈರ್ ಬಿನ್ ವಹಬ್ ಮತ್ತು ಸಫ್‌ವಾನ್ ಬಿನ್ ಉಮಯ್ಯ ಬದ್ರ್ ಯುದ್ಧದಲ್ಲಿ ಉಂಟಾದ ಸೋಲು ಮತ್ತು ಖುರೈಶೀ ಮುಖಂಡರ ನಾಶದ ಕುರಿತು ಮಾತನಾಡುತ್ತಿದ್ದರು. ಉಮ್ಮೈರ್ ಹೇಳಿದರು: ಒಬ್ಬ ವ್ಯಕ್ತಿಯ ಸಾಲ ತೀರಿಸಲು ಇರದಿದ್ದರೆ ಮತ್ತು ನನ್ನ ನಂತರ ನನ್ನ ಪತ್ನಿ ಮಕ್ಕಳ ಬಗ್ಗೆ ಚಿಂತೆ ಇರದಿದ್ದರೆ ನಾನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸುತ್ತಿದ್ದೆ. ಏಕೆಂದರೆ ನನಗೆ ಅಲ್ಲಿಗೆ ಹೋಗಲಿಕ್ಕಾಗಿ ಒಂದು ಕಾರಣವೂ ಇದೆ. ಅದೇನೆಂದರೆ, ನನ್ನ ಮಗನು ಅವರ ಬಳಿಯಲ್ಲಿ ಬಂಧಿಯಾಗಿದ್ದಾನೆ. ಇದನ್ನು ಕೇಳುತ್ತಲೇ ಆ ಎರಡೂ ಹೊಣೆಗಾರಿಕೆಯನ್ನು ಸಫ್‌ವಾನ್ ವಹಿಸಿಕೊಂಡನು ಮತ್ತು ಹೀಗೆ ಹೇಳಿದನು: ನೀನು ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ವಧಿಸು. (ನಊಧುಬಿಲ್ಲಾಹ್). ಉಮ್ಮೈರ್ ಸಫ್‌ವಾನ್‌ನೊಡನೆ ಹೇಳಿದ: ನನ್ನ ಮತ್ತು ನಿನ್ನ ನಡುವೆ ನಡೆದ ಈ ಮಾತನ್ನು ರಹಸ್ಯವಾಗಿ ಇಡು. ರಹಸ್ಯವಾಗಿ ಇಡುವುದಾಗಿ ಸಫ್‌ವಾನ್ ವಾಗ್ದಾನ ಮಾಡಿದನು. ಉಮ್ಮೈರ್ ತನ್ನ ಖಡ್ಗವನ್ನು ಚೂಪುಗೊಳಿಸಿದನು ಮತ್ತು ಅದನ್ನು ವಿಷದಲ್ಲಿ ಮುಳುಗಿಸಿದನು. ಅನಂತರ ಮಕ್ಕದಿಂದ ಹೊರಟು ಮದೀನಕ್ಕೆ ತಲುಪಿದನು. ಮದೀನಕ್ಕೆ ತಲುಪಿ ಮಸ್ಜಿದ್ ನಬವಿಯ ಬಳಿ ತನ್ನ ಒಂಟೆಯನ್ನು ಕುಳ್ಳಿರಿಸಿದನು. ಅದನ್ನು ನೋಡಿದ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನ ಈ ಶತ್ರು ಖಂಡಿತವಾಗಿಯೂ ಯಾವುದೋ ದುರುದ್ದೇಶದಿಂದ ಬಂದಿದ್ದಾನೆ.

ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಹೇಳಿದರು: ಅಲ್ಲಾಹನ ಪೈಗಂಬರರೇ, ಉಮ್ಮೈರ್ ಬಿನ್ ವಹಬ್ ತೆರೆದ ಖಡ್ಗದೊಂದಿಗೆ ಬಂದಿದ್ದಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಆತನನ್ನು ನನ್ನ ಬಳಿಗೆ ತನ್ನಿರಿ. ಹಝ್ರತ್ ಉಮರ್(ರ) ಆತನನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಂದರು.

ಉಮ್ಮೈರನು ಜಾಹಿಲಿಯ್ಯ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಸಲಾಂ ಹೇಳಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: ಎಲೈ ಉಮ್ಮೈರ್ ಅಲ್ಲಾಹನು ನಮಗೆ ನಿನ್ನ ಜಾಹಿಲಿಯಾ ಸಲಾಮಿಗಿಂತ ಉತ್ತಮವಾದ ಸಲಾಮನ್ನು ಕಲಿಸಿದ್ದಾನೆ. ಉಮ್ಮೈರ್ ಮಾತನಾಡುತ್ತಾ ಹೇಳಿದನು: ನಿಮ್ಮ ಬಂಧನದಲ್ಲಿ ಇರುವ ನನ್ನ ಪುತ್ರನಿಗೆ ಸಂಬಂಧಪಟ್ಟು ಮಾತನಾಡಲಿಕ್ಕೆ ನಾನು ಬಂದಿದ್ದೇನೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಹಾಗಾದರೆ ಈ ಖಡ್ಗದ ಉದ್ದೇಶವೇನು? ಆದರೆ ಉಮ್ಮೈರ್ ಪುನಃ ಹೇಳಿದನು: ನಾನು ನನ್ನ ಪುತ್ರನಿಗೆ ಸಂಬಂಧಪಟ್ಟು ಮಾತನಾಡಲಿಕ್ಕೆ ಬಂದಿದ್ದೇನೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನ್ನ ಉದ್ದೇಶ ಅದಲ್ಲ. ಒಂದು ದಿನ ನೀನು ಮತ್ತು ಸಫ್‌ವಾನ್ ಬಿನ್ ಉಮಯ್ಯ ಕಅ್‌ಬದ ದಿಣ್ಣೆಯ ಬಳಿ ಕುಳಿತು ಬದ್ರಿನಲ್ಲಿ ಕೊಲ್ಲಲ್ಪಟ್ಟವರ ಬಗ್ಗೆ ಮಾತನಾಡಿದ್ದೀರಿ. ಹೀಗೆ ಹೇಳಿಕೊಂಡು ಹಝ್ರತ್ ಪೈಗಂಬರ್(ಸ) ಅವರ ನಡುವೆ ನಡೆದ ಎಲ್ಲ ಮಾತುಕತೆಯನ್ನು ವಿವರಿಸಿದರು. ಇದನ್ನೆಲ್ಲ ಆಲಿಸಿ ಉಮ್ಮೈರ್ ಆಶ್ಚರ್ಯಗೊಂಡನು ಮತ್ತು ಕೂಡಲೇ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡನು. ಉಮ್ಮೈರ್ ಹೇಳಿದನು: ನಾವಿಬ್ಬರು ಮಾತುಕತೆ ನಡೆಸುವಾಗ ಅಲ್ಲಿ ಮೂರನೆಯವನಾಗಿ ಯಾರೂ ಇರಲಿಲ್ಲ. ಆದ್ದರಿಂದ ತಮಗೆ ಈ ಸಂಗತಿಯನ್ನು ಅಲ್ಲಾಹನಲ್ಲದೇ ಬೇರೆ ಯಾರೂ ಹೇಳಿರಲು ಸಾಧ್ಯವಿಲ್ಲ. ಅನಂತರ ಮಕ್ಕಕ್ಕೆ ಮರಳಿ ಹೋಗಲು ಮತ್ತು ಮಕ್ಕಾ ನಿವಾಸಿಗಳಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಲು ಹಝ್ರತ್ ಪೈಗಂಬರ್(ಸ)ರೊಡನೆ ಉಮ್ಮೈರ್ ಅನುಮತಿ ಕೇಳಿದನು. ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದರು.

ಮತ್ತೊಂದೆಡೆ ಮಕ್ಕದಲ್ಲಿ ಸಫ್‌ವಾನ್ ಎಲ್ಲರೊಡನೆ ಹೀಗೆ ಹೇಳುತ್ತಿದ್ದನು: ನಾನು ಬೇಗನೇ ನಿಮಗೆ ಎಂತಹ ಒಂದು ಸುವಾರ್ತೆಯನ್ನು ಹೇಳುವೆನು ಎಂದರೆ, ಅದರಿಂದ ನೀವು ಬದ್ರ್‌ನಿಂದ ಉಂಟಾದ ದುಃಖವನ್ನು ಮರೆತು ಬಿಡುವಿರಿ. ಮಕ್ಕದಿಂದ

ಆಗಮಿಸುವ ಪ್ರತಿಯೊಬ್ಬರೊಡನೆ ಉಮೈರನ ಕಾರ್ಯಾಚರಣೆಯ ಬಗ್ಗೆ ಸಫ್ವಾನ್ ಕೇಳುತ್ತಿದ್ದನು. ಕೊನೆಗೆ ಒಂದು ದಿನ ಉಮೈರ್ ಇಸ್ಲಾಂ ಸ್ವೀಕಾರ ಮಾಡಿದ ಸುದ್ದಿ ಲಭಿಸಿತು. ಮಕ್ಕಕ್ಕೆ ತಲುಪಿದ ಉಮೈರ್ ನೇರವಾಗಿ ತನ್ನ ಮನೆಗೆ ಹೋಗಿ ಮನೆಯವರಿಗೆ ಇಸ್ಲಾಮಿನ ಸಂದೇಶವನ್ನು ತಿಳಿಸಿದರು. ಅನಂತರ ಸಫ್ವಾನಿನ ಬಳಿಗೆ ಹೋಗಿ ಆತನಿಗೂ ಇಸ್ಲಾಮಿನ ಸತ್ಯತೆಯ ಬಗ್ಗೆ ತಿಳಿಸಿಕೊಟ್ಟರು. ಆದರೆ ಸಫ್ವಾನ್ ಉಮೈರನ ಮಾತುಗಳಿಗೆ ಉತ್ತರ ನೀಡಲೂ ಇಲ್ಲ, ಅವರ ಕಡೆಗೆ ಗಮನ ಕೊಡಲೂ ಇಲ್ಲ.

ಬದ್ರ್ ಯುದ್ಧದ ನಂತರ ಮುಸ್ಲಿಮರಾದ ಕೆಲವರು ಕಪಟತೆಯನ್ನು ಹೊಂದಿದ್ದರು. ಅಂಥವರಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಕೂಡ ಇದ್ದನು. ಈತನು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಆಗಮಿಸುವುದಕ್ಕಿಂತ ಮುಂಚೆ ಔಸ್ ಮತ್ತು ಖಝ್ರಜ್ ಗೋತ್ರಗಳ ಸಂಯುಕ್ತ ಸರದಾರನಾಗಬೇಕಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಆಗಮನದ ಕಾರಣ ಅದು ಸಾಧ್ಯವಾಗಲಿಲ್ಲ. ಹೀಗೆ ಆತನು ಇಸ್ಲಾಮಿನ ವಿರುದ್ಧ ರಹಸ್ಯವಾದ ಕುತಂತ್ರಗಳನ್ನು ಮಾಡಲು ತೊಡಗಿದ್ದನು.

ಬನೂ ಸುಲೈಂ ಮತ್ತು ಬನೂ ಗ಼ತ್ಫಾನಿನ ಜನರು ಮದೀನದ ಮೇಲೆ ದಾಳಿ ನಡೆಸಲು ತಯಾರಿ ಮಾಡುತ್ತಿದ್ದಾರೆ ಎಂದು ಬದ್ರ್‌ನಿಂದ ಮರಳಿ ಬಂದಾಗ ಹಝ್ರತ್ ಪೈಗಂಬರ್(ಸ)ರಿಗೆ ಸುದ್ದಿ ಲಭಿಸಿತು. ಈ ಸುದ್ದಿ ಲಭಿಸಿದ ಕೂಡಲೇ ಹಝ್ರತ್ ಪೈಗಂಬರ್(ಸ) ಬನೂ ಸುಲೈಂ ಮತ್ತು ಬನೂ ಗ಼ತ್ಫಾನಿನ ಕಡೆಗೆ ಹೋಗಲು ತೀರ್ಮಾನಿಸಿದರು ಮತ್ತು ಮುನ್ನೂರು ಸಹಾಬಿಯರ ಜೊತೆಗೆ ಅವರು ಹೊರಟರು. ಮುಸ್ಲಿಮರ ಅಚಾನಕ್ಕಾದ ಈ ಆಗಮನದ ಸುದ್ದಿ ಕೇಳಿ ಬನೂ ಸುಲೈಂ ಮತ್ತು ಬನೂ ಗ಼ತ್ಫಾನ್ ಗೋತ್ರಗಳು ಭಯಗೊಂಡರು ಮತ್ತು ಓಡಿಹೋಗಿ ಪರ್ವತಗಳ ಶಿಖರಗಳಲ್ಲಿ ಅಡಗಿಕೊಂಡರು. ಹಝ್ರತ್ ಪೈಗಂಬರ್(ಸ) ಮತ್ತು ಸಹಾಬಿಯರು ಕೆಲವು ದಿನಗಳು ಅಲ್ಲಿ ತಂಗಿದರು. ಈ ಕಾಲಾವಧಿಯಲ್ಲಿ ಯಾರಿಗೂ ಹಝ್ರತ್ ಪೈಗಂಬರ್(ಸ)ರ ಮುಂದೆ ಬರಲು ಧೈರ್ಯ ಉಂಟಾಗಲಿಲ್ಲ. ಈ ಜನರು ಯುದ್ಧದ ಉದ್ದೇಶದಿಂದ ಬಂದಿದ್ದ ಕಾರಣ ಆ ಕಾಲದ ರೂಢಿಯಂತೆ ಅವರ ಸಂಪತ್ತನ್ನು ವಶಪಡಿಸುವುದು ಅನುಮತನೀಯವಾಗಿತ್ತು. ಒಂದು ವರದಿಯ ಪ್ರಕಾರ ಈ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಯುದ್ಧ ಸಂಪತ್ತಾಗಿ ಐನೂರು ಒಂಟೆಗಳು ಲಭಿಸಿತು. ಈ ಕಾರ್ಯಾಚರಣೆಗೆ ಸಂಬಂಧಪಟ್ಟು ಹಝ್ರತ್ ಪೈಗಂಬರ್(ಸ) 15 ದಿನಗಳು ಮದೀನದ ಹೊರಗೆ ಇದ್ದರು.

ಹಿಜ್ರತಿನ ನಂತರ ಹಝ್ರತ್ ಪೈಗಂಬರ್(ಸ) ಹಿಜರೀ 2, ಶವ್ವಾಲ್ ಮಾಸದಲ್ಲಿ ಅಲ್ಲಾಹನ ಆಜ್ಞೆ ಪ್ರಕಾರ ಮುಸ್ಲಿಮರ ಮೊದಲ ಈದುಲ್ ಫಿತ್ರನ್ನು ಆಚರಿಸಿದರು. ಎರಡೂ ಈದ್‌ನ ಬಗ್ಗೆ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಈ ದಿನಗಳಲ್ಲಿ ಯಾವುದೇ ವ್ಯಕ್ತಿ ಉಪವಾಸ ಇರಿಸಬಾರದು. ಬದಲಾಗಿ ತಿಂದು ಉಂಡು ಖುಶಿಯನ್ನು ಆಚರಿಸಬೇಕು. ಎರಡೂ ಈದ್‌ಗಳ ವೇಳೆಗಳಲ್ಲಿ ಹಝ್ರತ್ ಪೈಗಂಬರ್(ಸ) ಮದೀನದ ಪೂರ್ವ ದಿಕ್ಕಿನಲ್ಲಿ ಇರುವ ಈದ್‌ಗಾಹ್‌ಗೆ ಹೋಗುತ್ತಿದ್ದರು.

ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಇಸ್ಲಾಮಿನ ಈದ್ ಹಬ್ಬಗಳು ತನ್ನೊಳಗೆ ಒಂದು ವಿಸ್ಮಯಕರವಾದ ವೈಭವವನ್ನು ಹೊಂದಿದೆ ಮತ್ತು ಅವುಗಳು ಇಸ್ಲಾಮಿನ ಸತ್ಯತೆ ಬಗ್ಗೆ ಬಹಳಷ್ಟು ಬೆಳಕು ಬೀರುತ್ತವೆ. ಮುಸ್ಲಿಮರ ಪ್ರತಿಯೊಂದು ಕೆಲಸವನ್ನು ದೇವಸ್ಮರಣೆಯೊಂದಿಗೆ ಜೋಡಿಸಲು ಯಾವ ರೀತಿಯಲ್ಲಿ ಇಸ್ಲಾಂ ಬಯಸುತ್ತದೆ ಎಂದು ಅಂದಾಜು ಮಾಡಲು ಸಂದರ್ಭ ಸಿಗುತ್ತದೆ.

ಬದ್ರ್ ಯುದ್ಧದ ನಂತರ ಮತ್ತು ಉಹದ್ ಯುದ್ಧಕ್ಕೆ ಮೊದಲು ಎರಡು ಸಂಶಯಕರವಾದ ಘಟನೆಗಳ ಪ್ರಸ್ತಾಪ ಸಹ ಲಭಿಸುತ್ತದೆ. ಅವುಗಳನ್ನು ಮೇಲ್ಮೇಲಿಂದ ನೋಡಿದರೂ ಕೂಡ ಇದು ಕಟ್ಟುಕಥೆ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮೊದಲನೇ ಘಟನೆ ಯಹೂದಿ ಮಹಿಳೆಯಾದ ಅಸ್ಮಾ ಬಿನ್ತ್ ಮರ್‌ವಾನ್ ಎಂಬ ಮಹಿಳೆಯ ವಧೆಗೆ ಸಂಬಂಧಿಸಿದ್ದಾಗಿದೆ. ಆಕೆಯನ್ನು ವಧಿಸಲಾಯಿತು ಎಂದು ಹೇಳಲಾಗುತ್ತದೆ. ಇದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮೈರ್ ಬಿನ್ ಅದ್ದಿ ಒಬ್ಬ ದೃಷ್ಟಿಹೀನ ಸಹಾಬಿಯಾಗಿದ್ದರು. ಹಿಜರೀ 2, ರಮಝಾನ್ ತಿಂಗಳ ಕೊನೆಯ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ) ಉಮೈರ್ ಬಿನ್ ಅದ್ದಿ(ರ)ರನ್ನು ಯಹೂದಿ ಮಹಿಳೆಯಾದ ಅಸ್ಮಾ ಬಿನ್ತ್ ಮರ್‌ವಾನಳ ಬಳಿಗೆ ಕಳುಹಿಸಿದರು. ಅವಳ ಬಳಿಗೆ ಕಳುಹಿಸಲು ಕಾರಣವೇನೆಂದರೆ, ಆಕೆ ಇಸ್ಲಾಂ ಧರ್ಮವನ್ನು ಬೈಯ್ಯುತ್ತಿದ್ದಳು, ಹಝ್ರತ್ ಪೈಗಂಬರ್(ಸ)ರ ವಿರುದ್ಧವಾಗಿ ಜನರನ್ನು ಹುರಿದುಂಬಿಸುತ್ತಿದ್ದಳು ಮತ್ತು ಪದ್ಯಗಳನ್ನು ಹಾಡುತ್ತಿದ್ದಳು. ಹಝ್ರತ್ ಉಮೈರ್(ರ) ರಾತ್ರಿಯ ಇರುಳಲ್ಲಿ ಅವಳ ಮನೆಗೆ ಪ್ರವೇಶಿಸಿದರು. ಆ ಮಹಿಳೆಯ ಬದಿಯಲ್ಲಿ ಅವಳ ಮಕ್ಕಳು ಮಲಗಿದ್ದವು. ಆಕೆ ತನ್ನ ಒಂದು ಮಗುವಿಗೆ ಹಾಲು ಕುಡಿಸುತ್ತಿದ್ದಳು. ಉಮೈರ್(ರ) ಅವಳ ಎದೆಗೆ ಖಡ್ಗವನ್ನು ಇರಿಸಿಕೊಂಡು ಅವಳನ್ನು ವಧಿಸಿದರು. ಅನಂತರ ಉಮೈರ್ ಮರಳಿ ಬಂದು ಫಜ್ರ್ ನಮಾಝ್ ಹಝ್ರತ್ ಪೈಗಂಬರ್(ಸ)ರ ಹಿಂದೆ ನಿರ್ವಹಿಸಿದರು. ಹಝ್ರತ್ ಪೈಗಂಬರ್(ಸ) ಕೇಳಿದಾಗ ಅಸ್ಮಾ ಬಿನ್ತ್ ಮರ್‌ವಾನಳನ್ನು ವಧಿಸಿದೆ ಎಂದು ಅವರು ಹೇಳಿದರು.

ಒಂದು ವರದಿಯ ಪ್ರಕಾರ ಉಮೈರ್ ಬಿನ್ ಅದ್ದಿ(ರ) ಅಸ್ಮಾ ಬಿನ್ತ್ ಮರ್‌ವಾನಳನ್ನು ವಧಿಸಿದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೇಳಿದರು: ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಸಹಾಯ ಮಾಡಿದ ವ್ಯಕ್ತಿಯನ್ನು ನೀವು ನೋಡಲು ಬಯಸುವುದಾದರೆ ಉಮೈರ್ ಬಿನ್ ಅದ್ದಿಯನ್ನು ನೋಡಿರಿ. ಇಸ್ತೀಆಬ್‌ನಲ್ಲಿ ಉಮೈರ್ ಬಿನ್ ಅದ್ದಿಯ ಜೀವನಚರಿತ್ರೆಯಲ್ಲಿ ಅವರು ತನ್ನ ಸಹೋದರಿಯನ್ನು ಕೂಡ ವಧಿಸಿದ್ದರು ಎಂದು ಬರೆಯಲಾಗಿದೆ. ಏಕೆಂದರೆ ಅವಳು ಹಝ್ರತ್ ಪೈಗಂಬರ್(ಸ)ರನ್ನು ಬೈಯ್ಯುತ್ತಿದ್ದರು.

(ಹುಝೂರ್ ಹೇಳಿದರು:) ಇತಿಹಾಸ ಮತ್ತು ಜೀವನಚರಿತ್ರೆಯ ಕೆಲವು ಗ್ರಂಥಗಳಲ್ಲಿ ಈ ಘಟನೆಯ ಪ್ರಸ್ತಾಪವಿದೆ. ಆದರೆ ಸಹೀಹಾದ ಆರು ಹದೀಸ್ ಗ್ರಂಥಗಳಲ್ಲೋ ಹದೀಸಿನ ಯಾವುದೇ ಅಧಿಕೃತ ಗ್ರಂಥದಲ್ಲೋ ಇದರ ಪ್ರಸ್ತಾಪವಿಲ್ಲ. ಸತ್ಯವೇನೆಂದರೆ, ನಂತರ ಕಾಲದ ಕೆಲವು ಜನರು ಈ ರೀತಿಯ ಕಟ್ಟುಕಥೆಗಳನ್ನು ತಮ್ಮ ಗ್ರಂಥಗಳಲ್ಲಿ ಬರೆದು ಸೇರಿಸಿ ಪ್ರವಾದಿ ನಿಂದೆಗೆ ಸಂಬಂಧಿಸಿ ಇವುಗಳನ್ನು ಮುಂದಿರಿಸಿದರು.

ಇಂದಿನ ಮುಲ್ಲಾಗಳು ಇಂತಹ ಘಟನೆಗಳನ್ನು ಉಲ್ಲೇಖಿಸಿ, ಪ್ರವಾದಿ ನಿಂದೆಯನ್ನು ಮಾಡುವವರನ್ನು ವಧಿಸಬೇಕು ಎಂದು

ಸಾಬೀತುಪಡಿಸಲು ಪ್ರಯತ್ನಿಸುತ್ತಾರೆ. ಆದರೆ ಪ್ರವಾದಿನಿಂದೆಗೆ ಯಾವುದೇ ರೀತಿಯ ಶಿಕ್ಷೆ ಇಸ್ಲಾಮಿನಲ್ಲಿ ಇಲ್ಲ. ಇಂತಹ ಘಟನೆಗಳಿಗೆ ಯಾವುದೇ ಆಧಾರವೂ ಇಲ್ಲ. ಉದಾಹರಣೆಗೆ ಈ ಹದೀಸನ್ನು ವಿಶ್ಲೇಷಣೆ ಮಾಡಿಕೊಂಡು ಓದುವುದಾದರೆ ಗೊತ್ತಾಗುವುದೇನೆಂದರೆ, ಇದು ಬಹಳ ದುರ್ಬಲ ಹದೀಸಾಗಿದೆ. ಮಾತ್ರವಲ್ಲ ಇದನ್ನು ನಿರ್ಮಿತ ಹದೀಸೆಂದು ಕೂಡ ಹೇಳಲಾಗಿದೆ. ಇದರ ಒಬ್ಬ ವರದಿಗಾರ ಮುಹಮ್ಮದ್ ಬಿನ್ ಅಮ್ರ್ ಅಖದಿ ಸುಳ್ಳುಗಾರನಾಗಿದ್ದನು. ಯುಕ್ತಿಯ ಆಧಾರದಲ್ಲಿ ನೋಡುವುದಾದರೂ ಈ ವರದಿಯ ಬಗ್ಗೆ ಅನೇಕ ಪ್ರಶ್ನೆಗಳು ಏಳುತ್ತವೆ. ಉದಾಹರಣೆಗೆ, ಈ ಸಹಾಬಿ ದೃಷ್ಟಿಹೀನರಾಗಿದ್ದರೂ ಆ ಮಹಿಳೆಯ ಮನೆಗೆ ಒಬ್ಬಂಟಿಯಾಗಿ ಹೇಗೆ ತಲುಪಿದರು? ಮಹಿಳೆಯನ್ನು ರಾತ್ರಿಯ ಅಂಧಕಾರದಲ್ಲಿ ಹೇಗೆ ಹುಡುಕಿ ಹಿಡಿದರು. ತಡಕಾಡುತ್ತಾ ಕಂಡುಹಿಡಿದರು ಎಂದಾದರೂ ಕೂಡ ಯಾರೂ ಏಕೆ ಎಚ್ಚರಗೊಳ್ಳಲಿಲ್ಲ. ಆ ಮಹಿಳೆ ಮಗುವಿಗೆ ಹಾಲು ಕುಡಿಸುತ್ತಿದ್ದಾಳೆ ಎಂದು ಅವರು ತಡಕಾಡುತ್ತಾ ಹೇಗೆ ಗೊತ್ತುಮಾಡಿಕೊಂಡರು. ಮಾತ್ರವಲ್ಲ ವಧಿಸಲ್ಪಟ್ಟ ಮಹಿಳೆ ಮೃತ್ಯುವನ್ನು ತನ್ನ ಮುಂದೆ ನೋಡಿಯೂ ಏಕೆ ಪ್ರತಿರೋಧದ ಅಥವಾ ಹೋರಾಟದ ಪ್ರಯತ್ನ ಮಾಡಲಿಲ್ಲ. ಮಹಿಳೆಗೆ ಕಣ್ಣುಗಳಿದ್ದರೂ ಕೂಡ ಅವಳು ಬೊಬ್ಬೆ ಹೊಡೆಯದೇ ಇರಲು ಮತ್ತು ಹೋರಾಟ ನಡೆಸದೇ ಇರಲು ಕಾರಣವೇನು? ಆ ಮಹಿಳೆಯ ಪತಿ ಅಲ್ಲೇ ನಿದ್ದೆ ಮಾಡುತ್ತಿದ್ದನು. ಆತನಿಗೂ ಏನೂ ಗೊತ್ತಾಗದೇ ಇರಲು ಹೇಗೆ ಸಾಧ್ಯ? ಅತ್ಯಂತ ಮುಖ್ಯವಾದ ಸಂಗತಿಯೇನೆಂದರೆ, ಕುರುಡರು ಶಬ್ದವನ್ನು ಕೇಳಿ ಕಂಡುಹಿಡಿಯುತ್ತಾರೆ. ಅವಳ ಯಾವುದೇ ಶಬ್ದವನ್ನು ಆಲಿಸದೇ ದೃಷ್ಟಿಹೀನ ಸಹಾಬಿಗೆ ಆ ಮಹಿಳೆ ಅಸ್ಮಾ ಬಿನ್ತ್ ಮರ್‌ವಾನ್ ಎಂದು ಹೇಗೆ ಗೊತ್ತಾಯಿತು? ಅವಳು ಖರ್ಜೂರವನ್ನು ತೆಗೆಯಲು ಒಳಗೆ ಹೋಗಿ ಖರ್ಜೂರವನ್ನು ಎತ್ತಲು ಬಾಗಿದಾಗ ಅವಳ ತಲೆಗೆ ಖಡ್ಗವನ್ನು ಬೀಸಿ ಅವಳನ್ನು ವಧಿಸಿದೆ ಎಂದು ಆ ದೃಷ್ಟಿಹೀನ ಸಹಾಬಿ ಹೇಳಿದ್ದಾಗಿಯೂ ಮತ್ತೊಂದು ವರದಿಯಲ್ಲಿ ಬಂದಿದೆ!

(ಹುಝೂರ್ ಹೇಳುತ್ತಾರೆ:) ಇದಲ್ಲದೇ ಹೆಚ್ಚಿನ ವರದಿಗಳಲ್ಲಿ ಮಹಿಳೆಯ ಹೆಸರು, ಕೊಲೆಗಾರನ ಹೆಸರು, ಕೊಲೆಯ ಸಮಯ ಮತ್ತು ಘಟನೆ ನಡೆದ ರೀತಿಯ ಬಗ್ಗೆ ಭಿನ್ನತೆ ಇದೆ. ಅವುಗಳು ಈ ಘಟನೆ ಕಟ್ಟುಕಥೆ ಎಂಬುವುದನ್ನು ಸಾಬೀತುಪಡಿಸುತ್ತವೆ.

ಮೂಲಭೂತವಾದಿ ಮುಲ್ಲಾಗಳು ಈ ರೀತಿಯ ಕಟ್ಟುಕಥೆಗಳಿಗೆ ಪ್ರಾಮುಖ್ಯತೆ ನೀಡಿ ಇಸ್ಲಾಮಿನ ಸುಂದರ ಅಧ್ಯಾಪನೆಗೆ ಕೆಟ್ಟ ಹೆಸರು ತಂದಿರುವರು. ಈ ಮುಲ್ಲಾಗಳು ಇತ್ತೀಚೆಗೆ ಇದೇ ರೀತಿಯ ಕಟ್ಟುಕಥೆಗಳನ್ನು ಹಣೆದು ಅಹ್ಮದಿಯರ ವಿರುದ್ಧವೂ ಕಠೋರತೆಯನ್ನು ತೋರಿಸುತ್ತಾರೆ ಮತ್ತು ಜನರನ್ನು ರೊಚ್ಚಿಗೆಬ್ಬಿಸುತ್ತಾರೆ.

ಇದರೊಂದಿಗೆ ಹೋಲಿಕೆಯನ್ನು ಹೊಂದಿದ ಮತ್ತೊಂದು ಘಟನೆ ಸಹ ಇದೆ. ಅದನ್ನು ಮುಂದಿನ ಬಾರಿ ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At,* ***'Masjid Mubarak',*** *Islamabad, Tilford, UK.* On 29-09-2023
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email****: khutuba.kannada@gmail.com*
**You can find all the Sermons archived at**: www.alislam.org/friday-sermon